
ತಾನು ಆಯ್ಕೆ ಮಾಡಿಕೊಂಡ ಮಾಧ್ಯಮದ ಮೂಲಕವೇ ಕಥೆಗೊಂದು ಅನನ್ಯತೆಯನ್ನು ಕಟ್ಟಿಕೊಡುವ ಅಪರೂಪದ ಕಿರುಚಿತ್ರವಿದು.

■ ಗೌರಿ

# ಅಂಟಿದ ನಂಟಿನ ಕೊನೆ ಬಲ್ಲವರಾರು?



'ತಾಂಡವ ನಡೆಸಿದ ಝುಂಝಾವಾತದ ಕಾಲಿನ ಹುಲುಗೆಜ್ಜೆ ನಾವಾಗಿರೆ ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ!'

ದ.ರಾ. ಬೇಂದ್ರೆ ಅವರ 'ಸಖೀಗೀತ'ದ ಈ ಸಾಲನ್ನು ಎಷ್ಟು ಸಲ ಓದಿದರೂ ಹೊಸತಾಗಿ ನಮ್ಮೊಳಗೆ ರಿಂಗಣವೆಬ್ಬಿಸುವಂತಿದೆ. ಗಂಡು ಹೆಣ್ಣಿನ ಸಂಬಂಧಗಳ ಸಂಕೀರ್ಣತೆಯಷ್ಟೇ ಅಲ್ಲ, ಮನುಷ್ಯ ಮತ್ತು ಈ ಜಗತ್ತಿನ ನಡುವಿನ ಸಂಬಂಧವನ್ನೂ ಒಂದು ತಂತುವಿನಲ್ಲಿ ಜೋಡಿಸುವ ಪ್ರಯತ್ನ ಇಲ್ಲಿದೆ.

ಜರ್ಮನಿಯ ಡೀನಾ ವೆಲಿಕೋವ್‌ಸ್ಕಾಯ ಅವರ ಕಿರುಚಿತ್ರ 'ಟ್ರೈಸ್' ನೋಡಿದಾಗ ಬೇಂದ್ರೆಯವರ ಈ ಸಾಲುಗಳು ನೆನಪಾಗುವುದು ಆಕಸ್ಮಿಕವೇನಲ್ಲ.

'ಟ್ರೈಸ್' 3ಡಿ ಪೆನ್‌ನಲ್ಲಿ ರೂಪಿಸಿದ ಎಂಟು ನಿಮಿಷಗಳ ಸ್ಟಾಪ್–ಮೋಷನ್ ಫಿಲ್ಮ್. ಆದರೆ ಇದು ನಮ್ಮೊಳಗೆ ಎಬ್ಬಿಸುವ ಭಾವತರಂಗಗಳು ಆ ಎಂಟು ನಿಮಿಷದಲ್ಲಿಯೇ ಮುಗಿಯುವುದಿಲ್ಲ.

ಕಥೆ ಮತ್ತು ಮತ್ತು ಅದನ್ನು ಹೇಳುವ ಮಾಧ್ಯಮದ ನಡುವಿನ ಸಂಬಂಧ ಅತ್ಯಂತ ಸಂಕೀರ್ಣವಾದದ್ದು. ಅದನ್ನು ಆಳವಾಗಿ ಅರ್ಥಮಾಡಿಕೊಂಡಾಗಲಷ್ಟೇ 'ಟ್ರೈಸ್'ನಂಥ ಕಿರುಚಿತ್ರಗಳು ಜೀವತಳೆಯಲು ಸಾಧ್ಯ.

ವಯಸ್ಸಾದ ಅಪ್ಪ ಅಮ್ಮನನ್ನು ಬಿಟ್ಟು ಮಗಳು ಪ್ರಪಂಚ ಪರ್ಯಟನೆಗೆ ಹೊರಟಿದ್ದಾಳೆ. ಅಪ್ಪ–ಅಮ್ಮನಿಗೆ ಒಬ್ಬಳೇ ಮಗಳನ್ನು ಬಿಟ್ಟಿರುವುದು ಕಷ್ಟ. ಮಗಳಿಗೂ ಆ ನೋವಿದೆ. ಆದರೆ ಅವಳ ವಯಸ್ಸು, ಮನಸ್ಸು ಸ್ವಾತಂತ್ರ್ಯವನ್ನು ಬೇಡುತ್ತಿದೆ. ಹಾಗಾಗಿ ಅವಳು ಪ್ರವಾಸಕ್ಕೆ ಹೊರಡುತ್ತಾಳೆ.

ಇದೊಂದು ಸರಳವಾದ ಕಥೆಯ ಎಳೆ. ತುಂಬ ಹೊಸದೇನೂ ಇಲ್ಲ. ಆದರೆ ಇದನ್ನು ನಿರ್ದೇಶಕರು ಹೇಳಿರುವ ರೀತಿ ಮತ್ತು ಅದಕ್ಕಾಗಿ ಆಯ್ದುಕೊಂಡ ಮಾಧ್ಯಮ ಇದಕ್ಕೆ ಎಂಥ ತಾಜಾತನವನ್ನೂ ಧ್ವನಿಶಕ್ತಿಯನ್ನೂ ಕೊಟ್ಟಿದೆಯೆಂದರೆ ಈ ಕಥೆಯನ್ನು ಹೀಗಲ್ಲದೆ ಬೇರೆ ಯಾವ ರೀತಿ ಹೇಳಿದ್ದರೂ ಇಷ್ಟು ಚೆನ್ನಾಗಿ ಹೇಳಲು ಸಾಧ್ಯವಿರಲಿಲ್ಲ ಎಂದು ಅನಿಸಿಬಿಡುತ್ತದೆ.

ರೇಖಾಚಿತ್ರಗಳ ಮೂಲಕವೇ ಇಲ್ಲಿ ಕಥೆಗಳು ಹರಿಯುತ್ತ ಹೋಗುತ್ತವೆ. ಆ ಚಿತ್ರಗಳನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ.

ಅಪ್ಪ ಅಮ್ಮನಿಂದ ಬೀಳ್ಕೊಟ್ಟು ಮಗಳು ಹೊರಡುವಾಗ ಮನೆ ಮುಂದಿನ ತೂಗುಯ್ಯಾಲೆಗೆ ಅವಳ ಉಡುಪಿನ ನೂಲೊಂದು ಸಿಕ್ಕಿಹಾಕಿಕೊಳ್ಳುತ್ತಾಳೆ. ಅವಳು ಅದರ ಕಡೆಗೆ ಲಕ್ಷ್ಯ ಕೊಡದೆ ಕಾರಿನಲ್ಲಿ ಹತ್ತಿ ಕೂಡುತ್ತಾಳೆ. ಕಾರು ಹೊರಡುತ್ತದೆ. ಕಾರು ಹೊರಡುತ್ತಿದ್ದ ಹಾಗೆಯೇ ಈ ತೂಗುಯ್ಯಾಲೆಯ ನೂಲು ಬಿಚ್ಚಿಕೊಳ್ಳುತ್ತ ಸಾಗುತ್ತದೆ. ತೂಗುಯ್ಯಾಲೆಯಿಂದ ಅದರನ್ನು ಕಟ್ಟಿದ ಮರ, ನಂತರ ಬಟ್ಟೆ ಒಣಗಿಸುವ ತಂತಿ, ಮನೆಯೊಳಗಿನ ಪಂಜರ, ಬಾಗಿಲ ಚಿಲಕ, ಕೀ ಚೈನ್ ಇಡುವ ಜಾಗ ಎಲ್ಲವೂ ಕಟ್ಟಿದ ದಾರ ಬಿಚ್ಚಿಕೊಳ್ಳುವ ಹಾಗೆ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಮಗಳು ಕಾರಿನಿಂದ ಇಳಿದು ವಿಮಾನ ಹತ್ತಿ ಹೊರಡುತ್ತಾಳೆ. ಆಗ ಇಡಿ ಮನೆಯೇ ದಾರದ ಹಾಗೆ ಬಿಚ್ಚಿಕೊಂಡು ಅದಕ್ಕೆ ನೇತುಬಿದ್ದ ಅಪ್ಪ ಅಮ್ಮನೂ ದಾರದ ಹಾಗೆ ಬಿಡಿಸಿಕೊಂಡು ಹೋಗುತ್ತಾರೆ.

ಆ ಮನೆಯನ್ನು, ಕುಟುಂಬಗಳನ್ನು, ಮನಸ್ಸುಗಳನ್ನು ಬೆಸೆದ ದಾರವಾಗಿ ಆ ಮಗಳಿದ್ದಳು. ಅವಳು ಮನೆ ಬಿಟ್ಟುಹೋಗುವಾಗ ಮನೆಯಲ್ಲಿ ಎಲ್ಲವೂ ಹೇಗೆ ಇದ್ದ ಹಾಗೆ ಇರಲು ಸಾಧ್ಯ? ಅಪ್ಪ ಅಮ್ಮನ ಮನಸ್ಸು ಮಗಳ ಹಿಂದೆಯೇ ಹೋಗುವುದಲ್ಲವೇ? ಅಲ್ಲಿನ ಉಯ್ಯಾಲೆ, ಪಂಜರ, ಅವಳು ದಿನವೂ ಕಾಫಿ ಕುಡಿಯುತ್ತಿದ್ದ ಕಪ್ ಎಲ್ಲವೂ ತಮ್ಮ ಅರ್ಥ ಮಹತ್ವಗಳನ್ನು ಕಳೆದುಕೊಂಡುಬಿಡುತ್ತವಲ್ಲವೇ? ಇದನ್ನು ರೇಖಾಚಿತ್ರ ಮಾಧ್ಯಮದ ಮೂಲಕ ನಿರ್ದೇಶಕರು ತುಂಬ ಅದ್ಭುತವಾಗಿ ಹೇಳಿದ್ದಾರೆ. ರೇಖಾಚಿತ್ರವಲ್ಲದೆ ಬೇರೆ ಯಾವ ರೀತಿಯ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡಿದ್ದರೂ ಇದನ್ನು ಹೀಗೆ, ಇಷ್ಟು ಪರಿಣಾಮಕಾರಿಯಾಗಿ ಹೇಳಲು ಸಾಧ್ಯವೇ ಇರಲಿಲ್ಲ.

ನಾವು ಆಯ್ದುಕೊಳ್ಳುವ ಮಾಧ್ಯಮವೇ ಹೂರಣವನ್ನೂ ನಿರ್ಧರಿಸುತ್ತದೆ ಎಂಬ ಮಾತು ಈ ಕಿರುಚಿತ್ರದಲ್ಲಿ ಸಾರ್ಥಕವಾಗಿದೆ. ಕಥೆ ಮತ್ತು ಮಾಧ್ಯಮಗಳ ನಡುವಿನ ಸಂಬಂಧವನ್ನು ಅಭ್ಯಾಸ ಮಾಡಲು ಸಿನಿಮಾ ವಿದ್ಯಾರ್ಥಿಗಳಿಗೆ ಇದೊಂದು ಪಠ್ಯದಂತಿದೆ.

**ಹೆಸರು:** ಟ್ರೈಸ್
**ನಿರ್ದೇಶನ:** ಡೀನಾ ವೆಲಿಕೋವ್‌ಸ್ಕಾಯ
**ನಿರ್ಮಾಣ:** ಎಸ್‌ಎಂಪಿಎಲ್ ಆ್ಯಂಡ್ ಸ್ಟುಡಿಯೊ
**ಧ್ವನಿ, ಸಂಗೀತ:** ಆರ್ಟೆಮ್ ಫೆಡೀವ್





ಕಿರುಚಿತ್ರ ವೀಕ್ಷಣೆಗೆ https://bit.ly/3rcz83C ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.